JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ಕುರುಮನ್ಸ್ ಬುಡಕಟ್ಟಿನ ಜೀವನಾವರ್ತಕ ಆಚರಣೆಗಳು

-ಶಿಲ್ಪ ಕೆ ಎಚ್

ಅಲೆಮಾರಿಯಾಗಿದ್ದ ಮಾನವ ಒಂದು ಅಂತದಲ್ಲಿ ನೆಲೆನಿಂತ. ಬೇಟೆ ಆಹಾರ ಸಂಗ್ರಹಣೆಯಿಂದ ಕೃಷಿಕಡೆಗೆ ವಾಲಿದ. ಅಲ್ಲಿ ನಾಗರೀಕರಣ ಬೆಳೆಯಲಾರಂಭಿಸಿತು. ಅಲೆಮಾರಿ ಮೂಲನಿವಾಸಿಯಿಂದ ಆಧುನಿಕ ತಂತ್ರಜ್ಞಾನದ ಜಗತ್ತಿನೊರೆಗೂ ಹೊಸತನಕ್ಕೆ ತನ್ನನ್ನು ಹೋಗ್ಗಿಕೊಂಡು ಬಂದಿದ್ದಾನೆ. ಪ್ರಪ□ಚದ ಎಲ್ಲಾ ಜಾತಿ ಧರ್ಮಗಳು ಬುಡಕಟ್ಟು ಅವಸ್ಥೆಯಿಂದ ಮುಂದುವರೆದು ಹೋದಂತವುಗಳಾಗಿರುತ್ತವೆ. ಆದರೆ ಹೊಸತನಕ್ಕೆ ದೂರ ಉಳಿದು ಬದಲಾವಣೆಗಳನ್ನು ಅತಿ ಸುಲಬವಾಗಿ ಒಪ್ಪದ ಕೆಲ ಸಮುದಾಯಗಳು ಬುಡಕಟ್ಟು ಅವಸ್ಥೆಯಲ್ಲಿವೆ.

ಬುಡಕಟ್ಟು ಎಂಬ ಪದವು ಮೂಲಿಗರು ಎಂದು ಅರ್ಥಕೊಡುತ್ತದೆ. ಬುಡ ಎಂದರೆ ಬೇರು, ಕಟ್ಟು ಎಂದರೆ ಕೂಟ ಒಟ್ಟಾರೆಯಾಗಿ ನೋಡಿದರೆ ಬೇರುಗಳ ಕೂಟ ಅಂದರೆ ಒಂದೇ ಬೇರಿನ ಕವಲುಗಳು, ಒಂದೇ ಕಳ್ಳುಬಳ್ಳಿಯವರು, ಮೂಲಿಗರೆಂಬರ್ಥ. ಇಂಗ್ಲೀಷಿನಲ್ಲಿ è mÉæöÊ¨ï ಎಂದು ಕರೆಯುತ್ತಾರೆ. Tribe ಎಂಬ ಪದವು ಲ್ಯಾಟಿನ್ ಪದ tribus ಎಂಬ ಪದದಿಂದ ಬಂದಿದೆ. ಟ್ರೈಬಗಳನ್ನು aboriginal ಎಂದು ಕರೆಯುತ್ತಾರೆ ಅಂದರೆ ಮೂಲನಿವಾಸಿಗರು ಅಥವಾ ಮೊದಲಿಗರೆಂಬ ಅರ್ಥವನ್ನು ಕೊಡುತ್ತದೆ. ಬುಡಕಟ್ಟು ಎಂದರೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿ, ನಿರ್ಧಿಷ್ಟ ಭಾಷೆ ಮಾತನಾಡುವ, ಒಂದೇ ನಾಮದೇಯವನ್ನು ಹೊಂದಿರುವ, ಒಂದೇ ಆದಿದೈವ\ ಮೂಲ ಪುರುಷ ಇರುವ, ತನ್ನದೆಯಾದ ಕಟ್ಟು ಪಾಡುಗಳುಳ್ಳ, ವಿವಾಹ ಉದ್ಯೋಗಗಳಿಗೆ ಸಂಬಂಧಿಸಿದಂತೆ ಒಂದೇ ಬಗೆಯ ವಿಧಿ ನಿಷೇಧಗಳಿಗೆ ಬದ್ಧವಾಗಿ ಸ್ವತಂತ್ರ ಮತ್ತು ಅನ್ಯೂನ್ಯತೆಯಿಂದ ಬಾಳುವ ಸಮುದಾಯ. ವರ್ಣಾಶ್ರಮದ ನಂತರ ಕಸುಬುಗಳ ಆಧಾರದ ಮೇಲೆ ಜಾತಿಗಳು ಸೃಷ್ಟಿಯಾದವು. ಜಾತಿಗಳು ದೊಡ್ಡ ಪ್ರಮಾಮಾಣದಲ್ಲಿ ಬೆಳೆದು ಕೇವಲ ಕಸುಬಿಗೆ ಸೀಮಿತವಾಗದೆ ಒಂದು ಸಾಮಾಜಿಕ ಗುಂಪುಗಳಾಗಿ ಬಲಗೊಂಡವು. ವೃತ್ತಿಯಿಂದ ಜಾತಿಗಳ ಉಗಮವಾದರೂ ಪ್ರಸ್ತುತ ಸಂದರ್ಭದಲ್ಲಿ ಜಾತಿಗಳು ಒಬ್ಬ ವ್ಯಕ್ತಿಯ ಅಸ್ತಿತ್ವವನ್ನು ತಿಳಿಸುತ್ತದೆ. ನೆಲೆ ಮೂಲ ತಿಳಿಯುವಲ್ಲಿ, ಸಂಸ್ಕೃತಿ ಅರ್ಥೈಸುವಲ್ಲಿ, ಸಂಬಂಧಗಳ, ಸಂಪ್ರದಾಯಗಳ, ರೂಢಿ ಆಚರಣೆಗಳ ಸಂಕೇತವಾಗಿ ಜಾತಿಗಳು ಬೆಳೆದು ನಿಂತಿವೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಾಸವಾದವರು ಜಾತಿಗಳಾಗಿ ನಂತರ ಧರ್ಮದ ಚೌಕಟ್ಟಿನೊಳಗೆ ಸೇರಿದವು. ಜಾತಿ ವ್ಯವಸ್ಥೆಗೆ ಸಿಲುಕದೆ ಕಾಡು ಮೇಡು ಬೆಟ್ಟ ಗುಡ್ಡಗಳಲ್ಲಿದ್ದ ಸಮುದಾಯಗಳು ಬುಡಕಟ್ಟುಗಳಾಗಿ ಅಲೆಮಾರಿಗಳಾದವು. ಇವರು ಕಡಿಮೆ ಜನ ಸಂಖ್ಯೆಯುಳ್ಳ ವಿಭಿನ್ನ ಭಾಷೆ ಮಾತನಾಡುವ ವಿಶೀಷ್ಟ ಸಂಸ್ಕೃತಿಯನ್ನು ಹೊಂದಿರುವ ಆದಿಮ ಸ್ಥಿತಿಯಲ್ಲಿರು ಗುಂಪುಗಳಾದವು.

ಬುಡಕಟ್ಟುಗಳು ಆಧುನಿಕ ಸಮಾಜದಿಂದ ಹೊರಗುಳಿದ ಕಾರಣ ಇಂದಿಗೂ ಕೂಡ ಮೂಲ ಆಚರಣೆಗಳನ್ನು ಉಳಿಸಿಕೊಂಡು ಬಂದಿವೆ. ಹುಟ್ಟಿನಿಂದ ಸಾವಿನವರೆಗೂ ಎಲ್ಲಾ ಆಚರಣೆಗಳಲ್ಲಿ ತನ್ನದೇಯಾದ ವಿಶಿಷ್ಟತೆ ಉಳಿಕೊಂಡು ತನ್ನ ಅಸ್ಮಿತೆಯನ್ನು ತೋರುತ್ತದೆ. ಅಂತಹ ವಿಶೇಷ

ಆಚರಣೆಗಳನ್ನು ಹೊಂದಿರುವ ಕುರುಮನ್ಸ್ ಬುಡಕಟ್ಟಿನ ಸಂಪ್ರದಾಯಗಳನ್ನು ಅನಾವರ್ಣಮಾಡುವ ಪ್ರಯತ್ನ ಪ್ರಸ್ತುತ ಲೇಖನದ ಉದ್ದೇಶವಾಗಿದೆ. ಈ ಲೇಖನವನ್ನು ಕ್ಷೇತ್ರಕಾರ್ಯದಲ್ಲಿ ದೊರೆತ ನೇರ ಮಾಹಿತಿಯಿಂದ ರಚಿಸಲಾಗಿದೆ. ಪ್ರಶ್ನಾವಳಿ, ಸಂದರ್ಶನ, ಸಹಭಾಗಿತ್ವ ಅವಲೋಕನ ದಿಂದ ಮಾಹಿತಿ ಕಲೆಯಾಕಲಾಗಿದೆ.

**ಕುರುಮನ್ಸ್ ಬುಡಕಟ್ಟಿನ ಪರಿಚಯ**

ಕರ್ನಾಟಕದ ೫೦ ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಕುರುಮನ್ಸ್ ಬುಡಕಟ್ಟು ಕ್ರಮ ಸಂಖ್ಯೆ ೨೯ರಲ್ಲಿ ದಾಖಲಾಗಿದೆ. ಪಶುಪಾಲಕ ಸಮುದಾಯವಾಗಿದ್ದ ಇವರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಅತ್ಯಂತ ಹಿಂದುಳಿದಿದ್ದು ಸಂವಿಧಾನಬದ್ದ ಮೀಸಲಾತಿಯ ಮೂಲಭೂತ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲರಾಗಿದ್ದಾರೆ. ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಿಣ್ಯಂ ಮತ್ತು ಹೂಗ್ಯಂ ಗ್ರಾಮ ಪಂಚಾಯಿತಿಯ ನೆಲೆಗಳಾದ ಹೂಗ್ಯಂ, ಕೊಪ್ಪ, ಗಾಜನೂರು, ನಕ್ಕುಂದಿ, ಸೂಳೆಕೋಬೆ, ಮೀಣ್ಯಂ, ಯರಂಬಾಡಿ, ಚಿಲ್ಲಾಲ್ಲರದೊಡ್ಡಿ, ದೊಮ್ಮೆಗೌಡರದೊಡ್ಡಿ, ಕೂಡ್ಲೂರುಗಳಲ್ಲಿ ವಾಸವಾಗಿದ್ದಾರೆ. ೨೦೧೮-೧೯ರ ಸಮೀಕ್ಷೆಯ ಪ್ರಕಾರ ೪೦೩೮ ಜನಸಂಖ್ಯೆ ಇವರದಿರುವುದು. ಇವರನ್ನು ಸ್ಥಳೀಯರು ಕುರುಂಬರು, ಕೊಂಗನಾಡ ಕುರುಬರು, ೭ ಹಟ್ಟಿ ಕುರುಬರು, ಒಕ್ಕೆ ಕುರುಬರು, ಕುರುಮನ್ಸ್ ಎಂದು ಗುರುತಿಸುತ್ತಾರೆ. ಇದುವರೆಗೂ ಇವರು ತಪ್ಪಾಗಿ ಕುರುಬರು ಎಂದು ಕರ್ನಾಟಕ ಹಿಂದುಳಿದ ವರ್ಗದ ಪ್ರವರ್ಗ ೨ಎ ಜಾತಿ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ಆದರೆ, ಇವರ ಮೂಲನೆಲೆ, ಆಚರಣೆಗಳು ಮತ್ತು ಕೊಡುಕೊಳ್ಳುವುದೆಲ್ಲವೂ ತಮಿಳುನಾಡಿನ ಕುರುಮನ್ಸ್ ಬುಡಕಟ್ಟಿನೊಂದಿಗಿದೆ, ಕರ್ನಾಟಕದ ಇತರೆ ಕುರುಬರೊಂದಿಗೆ ವೈವಾಹಿಕ, ಸೋದರ ಮತ್ತು ದೈವದ ಸಂಬಂಧಗಳು ಇರುವುದಿಲ್ಲ.

ಮೂಲತಃ ತಮಿಳುನಾಡು ಮತ್ತು ಕರ್ನಾಟಕದ ಗಡಿ ಭಾಗದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ವಾಸಿಸುವ ಕುರುಮನ್ಸ್ ಬುಡಕಟ್ಟಿನವರು ಕನ್ನಡ ಮಿಶ್ರಿತ ತಮಿಳು ಭಾಷೆಯ ಕುರುಮನ್ಸ್ ಮಾತನಾಡುತ್ತಾರೆ. ತಮಿಳುನಾಡಿನ ಧರ್ಮಪುರಿ, ಕೃಷ್ಣಗಿರಿ, ಸೇಲಂ, ಮೆಟೂರು ಭಾಗಗಳಲ್ಲಿ ವಾಸಿಸುವ ಕುರುಮನ್ಸ್ ಬುಡಕಟ್ಟಿಗೂ ಕರ್ನಾಟಕದ ಚಾಮರಾಜನಗರ ಜಿಲ್ಲೆಯಲ್ಲಿರುವ ಕುರುಮನ್ಸ್‌ನಲ್ಲಿ ಪರಸ್ಪರ ವೈವಾಹಿಕ ಮತ್ತು ಸಾಂಸ್ಕೃತಿಕ ಸಂಬಂಧಗಳಿವೆ. ಮದುವೆ, ಹಬ್ಬಾಚರಣೆ, ದೇವರಕಾರ್ಯ ಸಂಪ್ರದಾಯಗಳಲ್ಲಿ ಸಾಮ್ಯತೆಗಳಿವೆ. ಆನೆಕುಲ, ಅರಳಿಕುಲ, ಅರಿಕುಲ, ಬನ್ನಿಕುಲ, ಬೀಸುಕುಲ, ಬೆಳ್ಳಿಕುಲ, ಬೊಟ್ಟುಕುಲ, ಚಂದ್ರಕುಲ, ಕುಂಟುಕುಲ, ಕ್ವಾಟೆಕುಲ, ಮೀನುಕುಲ, ಒನಕೆಕುಲ, ಸ್ವಾಮಕುಲ, ಸಂಕಿಕುಲ, ಸುನ್ನಾರಕುಲ ಇತ್ಯಾದಿ ಕುಲಗಳಿವೆ. ಮಾರಮ್ಮ, ಏಳುಮಂದರಾಯ, ರಾಕಾಸಿ ರಾವಳದೇವರು, ಒಂಟಪ್ಪ, ಪುತ್ತೂರುದೇವರು, ಜೋಗದೇವರು, ಮುನಿದೇವರು, ಕುಮ್ಮಟದ್ಯೆಯ್ಯ, ಪನ್ನವಾಡ ದೇವರು, ಕೋಣದ ಮಾರಮ್ಮ, ದೊಡ್ಡ ದೇವರು, ಮಾಥೂರ ದೇವರು, ಬೆಟ್ಟದ ದೇವರು ಇತ್ಯಾದಿ ದೈವಗಳಲ್ಲಿಯೂ ಸಾಮ್ಯತೆಯಿದೆ. ಕರ್ನಾಟಕದ ಕುರುಮನ್ಸ್ ಸಮುದಾಯದ ಕೆಲವರ ಮನೆದೈವಗಳು ತಮಿಳುನಾಡಿನಲ್ಲಿವೆ.

ಕುರುಮನ್ಸ್ ಯಾವುದೇ ದೇವರ ಕಾರ್ಯ ಮಾಡಿದರು ತಲೆಗಾಯಿ ಎಂದು ಸಮುದಾಯದ ಗಂಡುಮಕ್ಕಳು ದೇವರ ಮುಂದೆ ತಮ್ಮ ತಲೆಗೆ ತೆಂಗಿನಕಾಯಿಯನ್ನು ಹೊಡೆಸಿಕೊಳ್ಳುವ ಪದ್ಧತಿ ರೂಢಿಯಲ್ಲಿದೆ.

ಬುಡಕಟ್ಟು ಲಕ್ಷಣಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಕರ್ನಾಟಕದ ಕುರುಮನ್ಸ್ ಬುಡಕಟ್ಟು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮೂಲಭೂತ ಸೌಕರ್ಯ ಇಲ್ಲದೇ ಶಿಕ್ಷಣ ಮತ್ತು ಸಾರ್ವಜನಿಕ ಉದ್ಯೋಗಗಳಲ್ಲಿ ಹಿಂದುಳಿದಿದೆ.

**ಜೀವನಾವರ್ತಕ ಆಚರಣೆಗಳು**

ಹುಟ್ಟಿನಿಂದ ಸಾವಿನವರೆಗೂ ಮನುಷ್ಯನು ಅನೇಕ ಘಟ್ಟಗಳನ್ನು ಅನುಭವಿಸುತ್ತಾನೆ. ಪ್ರಕೃತಿ ಸಹಜವಾದ ಹುಟ್ಟು ಸಾವುಗಳ ನಡುವೆ ಕಟ್ಟಿಕೊಂಡ ನಾಗರೀಕತೆಯೇ ಮಾನವನ ಬದುಕಾಗಿರುತ್ತದೆ.

ರೂಢಿ ಸಂಪ್ರದಾಯಗಳು ಕಾಲ ಕ್ರಮೇಣ ಜ್ಞಾನದ ಶಾಖೆಗಳಂತೆ ಆಚರಣೆಗಳಾದವು. ಬೆಳೆಯುತ್ತಿರುವ ಆಧುನಿಕ ಪ್ರಪಂಚದಲ್ಲಿ, ಆಚರಣೆಗಳಿಂದಿರುವ ಅರಿವನ್ನು ಮರೆತು ಕೆಲವು ಗೊಡ್ಡು ಸಂಪ್ರದಾಯಗಳಂತೆ ಕಂಡರೂ ಅದನ್ನು ವಿಶ್ಲೇಷಿಸಿದಾಗ ಸತ್ಯವು ಕಂಡುಬರುತ್ತದೆ. ಪ್ರಸ್ತುತ ಕುರುಮನ್ಸ್ ಬುಡಕಟ್ಟಿನ ಹುಟ್ಟಿನಿಂದ ಸಾವಿನವರೆಗೂ ಇರುವ ಆಚರಣೆಗಳನ್ನು ಉಲ್ಲೇಖಿಸಲಾಗಿದೆ. ಅವುಗಳು ಇಂತಿವೆ.

**ಹುಟ್ಟಿನ ಸಂದರ್ಭದ ಆಚರಣೆ**

ಕುರುಮನ್ಸ್ನಲ್ಲಿ ಹುಟ್ಟಿನ ಸಂದರ್ಭದಲ್ಲಿ ೯ ದಿನಗಳ ಕಾಲ ಸೂತಕ ಆಚರಿಸುತ್ತಾರೆ. ೯ನೇ ದಿವಸ ಸೂತಕ ಕಳೆಯುವ ಆಚರಣೆಯನ್ನು ಒಳಮೊಟ್ಟೋದು ಎಂದು ಕರೆಯುತ್ತಾರೆ. ಹಿಂದಿನ ಕಾಲದಲ್ಲಿ ಪ್ರಸವವು ಮನೆಯಂಗಳದಲ್ಲಿ ನಡೆಯುತ್ತಿದ್ದವು ಪ್ರಸ್ತುತ ಆಸ್ಪತ್ರೆಯಲ್ಲಿ ಹೆಚ್ಚು ಆದ್ಯತೆ ನೀಡುತ್ತಾರೆ. ಪ್ರಸವವಾದ ೯ನೇ ದಿನ ಸೂತಕ ಕಳೆಯುವ ದಿವಸ. ಅಂದು ಮಗು ಮತ್ತು ತಾಯಿಯನ್ನು ಹರಿಯುವ ನೀರಿನ ಹಳ್ಳದ ಬಳಿ ಕರೆದುಕೊಂಡು ಹೋಗಿ ಹಸುವಿನ ಸಗಣಿಯಲ್ಲಿ ಐದು ಬಗೆಯ ಧಾನ್ಯಗಳಾದ ಬತ್ತ, ಅವರೆ, ಅಳಸಂದೆ, ಉರುಳಿ, ಹೆಸರುಕಾಳು ಬೆರೆಸಿ ಬೊಮ್ಮಪ್ಪನನ್ನು ಮಾಡಿ ಗರಿಕೆಯನ್ನು ಇಟ್ಟು ಪೂಜೆಮಾಡಿ ಮಗುವಿನ ಬಟ್ಟೆಯನ್ನು ಹಳ್ಳದಲ್ಲಿ ತೊಳೆದು ಶುದ್ಧ ಮಾಡಿಕೊಂಡು ಮಗುವಿನತಾಯಿ (ಬಾಣಂತಿ) ಇಟ್ಟ ಸಗಣಿಯನ್ನು ದಾಟಿ ಮನೆ ಬರುವ ಪ್ರಕ್ರಿಯನ್ನು ಒಳಮೆಟ್ಟುವುದು ಎಂದು ಕರೆಯುತ್ತಾರೆ.

ಹುಟ್ಟಿದ ಮಗುವಿಗೆ ಹೆಸರು ಇಡುವ ಪ್ರತ್ಯೇಕವಾಗಿ ಯಾವುದೇ ಆಚರಣೆ ಮಾಡುವುದಿಲ್ಲ. ಜನಿಸಿದ ಒಂದು ತಿಂಗಳ ನಂತರ ಮನೆದೇವರಾಗಲಿ, ಮನೆ ಹಿರಿಯರ ಹೆಸರಾಗಲಿ ಮಗುವಿಗೆ ಕರೆದು ಸರ್ಕಾರಿ ದಾಖಲೆಗಳಿಗೆ ಕೊಡುವಾಗ ತಂದೆ ತಾಯಿಗೆ ಇಷ್ಟವಾದ ಹೆಸರನ್ನು ಕೊಡುವುದರಿಂದ ಮುಂದೆ ಅದೇ ಹೆಸರು ಉಳಿಯುತ್ತದೆ.

**ಋತುಮತಿ ಸಂದರ್ಭದ ಆಚರಣೆ**

ಕುರುಮನ್ಸ್ನಲ್ಲಿ ಹೆಣ್ಣುಮಗಳು ಪುಷ್ಪವತಿಯದಾಗಲೂ ಸೂತಕ ಆಚರಿಸುತ್ತಾರೆ. ೫ದಿನಗಳ ಕಾಲ ಪುಷ್ಪವತಿಯಾದ ಹುಡುಗಿಯನ್ನು ಮನೆಯಿಂದ ಹೊರಗೆ ಕೂರಿಸಲಾಗುತ್ತದೆ. ೫ನೇ ದಿವಸ ಸೋದರಮಾವನವರು ಹೆಣ್ಣಿನ ತಲೆಮೇಲೆ ನೀರು ಸುರಿಯುತ್ತಾರೆ ನಂತರ ಮುತ್ತೈದೆಯರು ನೀರು ಸುರಿದು ಸ್ನಾನ ಮಾಡಿಸುತ್ತಾರೆ. ಸೋದರಮಾವ ಹೆಣ್ಣಿನ ಮಡಿಲು (ಹಣ್ಣು, ಎಲೆಅಡಿಕೆ, ಅಕ್ಕಿ, ಬೆಲ್ಲ, ಕೊಬ್ಬರಿ ಬಟ್ಟಲು) ತುಂಬುತ್ತಾರೆ. ಅಲ್ಲಿಗೆ ಸೂತಕ ಕಳಿಯುತ್ತದೆ. ಮತ್ತು ಗುಡಿಸಲು ಹಾಕುವ ಶಾಸ್ತ್ರ ಕೂಡ ಮಾಡಲಾಗುತ್ತದೆ ಆದರೆ ಪುಷ್ಪವತಿಯಾದ ಸಂದರ್ಭದಲ್ಲೇ ಮಾಡಬೇಕೆಂಬುದೇನು ಇರುವುದಿಲ್ಲ. ತಮ್ಮ ಅನುಕೂಲಕ್ಕೆ ತಕ್ಕಹಾಗೆ ಆರ್ಥಿಕ ಸ್ಥಿತಿಗನುಗುಣವಾಗಿ ಮದುವೆಗು ಮುನ್ನ ಗುಡ್ಲುಶಾಸ್ತ್ರ ಮಾಡಲಾಗುತ್ತದೆ.

**ಗುಡಿಸಲುಶಾಸ್ತ್ರ**

೫ ಜನ ಸೋದರಮಾವನ ಹೆಂಡತಿಯರು (ಅತ್ತೆಯರು) ಕೈಯಲ್ಲಿ ಬೇವಿನ ಸೊಪ್ಪು, ಕಬ್ಬಿಣದ ಆಯುಧ ಕೊಟ್ಟು ಹೆಣ್ಣು ಮಗಳನ್ನು ಮನೆಯಿಂದ ಹೋರಗೆ ಕರೆದುಕೊಂಡುಬಂದು ಮಂದಲಿಗೆ(ಮಣೆ) ಹಸಿಮೈ ಹೆಣ್ಣನ್ನು ಅದರ ಮೇಲೆ ಕೂರಿಸುತ್ತಾರೆ ಹೆಣ್ಣಿನ ಕೈಯಿಗೆ ಹವಳ(ಕೆಂಪುಮಣಿ) ಕಟ್ಟುತ್ತಾರೆ. ೫ ಜನ ಸೋದರಮಾವಂದೀರು ಹೆಣ್ಣಿಗೆ ಹಣ್ಣುಕಾಯಿ ಸೀರೆ ಬಟ್ಟೆಯನ್ನು ಮಡಿಲು ತುಂಬಿಸಿ ಅರಿಶಿನ ಕುಂಕುಮಹಚ್ಚಿ ಶಾಸ್ತ್ರ ಮಾಡುತ್ತಾರೆ. ನಂತರ ಐವರು ಮಾವಂದೀರು ಅಂಚಿಹುಲ್ಲು ತರುತ್ತಾರೆ. ತಂದ ಅಂಚಿಹುಲ್ಲಿನಿಂದ ಗುಡಿಸಲು ಕಟ್ಟುತ್ತಾರೆ. ತಯಾರಾದ ಗುಡಿಸಲಿಗೆ ಸೋದರಮಾವಂದೀರು ೩ ಬಾರಿ ಒಳಹೋಗಿ ಹೊರ ಬರುತ್ತಾರೆ. ೩ ನೇ ಬಾರಿಗೆ ಹೊರಬರುವಾಗ ಗುಡಿಸಲು ವಸಲಿನಲ್ಲಿ (ಚಕ್ಕಬಾಕಲು) ಕುಳಿತುಕೊಳ್ಳುತ್ತಾರೆ. ಕುಳಿತವರಿಗೆ ಹಾಲು ತುಪ್ಪವನ್ನು ತಟ್ಟೆಯಲ್ಲಿ ಕೊಡುತ್ತಾರೆ ಅವರು ಅದನ್ನು ಕುಡಿದು ಅಲ್ಲಿಂದ ಎದ್ದು ಹೊರಬರುತ್ತಾರೆ. ನಂತರ ಹೆಣ್ಣನ್ನು ಅದೇ ಜಾಗದಲ್ಲಿ ಕೂರಿಸಿ ಅಪ್ಪನ ಮನೆ ಶಾಸ್ತ್ರ ಅಂದರೆ ೧೨

ಬಗೆಯ ವಿವಿಧ ತಟ್ಟೆ (ಹಣ್ಣು, ಕಾಯಿ, ಸೀರೆ ಬಟ್ಟೆ, ಅರಿಶಿಣಕುಂಕುಮ, ಹೂವು, ಎಲೆಅಡಿಕೆ) ಎಲ್ಲಾವನ್ನು ಹೆಣ್ಣಿಗೆ ೯ಜನ ಮುತ್ತೈದೆರು ಅರಿಶಿನ ಕುಂಕುಮ ಅಚ್ಚಿ ಮಡಿಲು ತುಂಬುತ್ತಾರೆ. ತುಂಬಿದ ಮಡಿಲನ್ನು ಹಿಡಿದುಕೊಂಡು ಹೆಣ್ಣು ಗುಡಿಸಿಲಿಗೆ ೩ ಬಾರಿ ಒಳಹೋಗಿ ಹೊರಬಂದು ೩ನೇ ಬಾರಿ ಒಳಗೆ ಸೇರಿಕೊಳ್ಳುತ್ತಾರೆ. ನಂತರ ಗುಡಿಸಲಿಗೆ ತಡಿಕೆ ಮುಚ್ಚಿ ೫ ಜನ ಹೆಣ್ಣು ಮಕ್ಕಳಿಗೆ ಬಾಳೆಹಣ್ಣು ತಂಬಿಟ್ಟು ಕಲಸಿ ಕೊಡುತ್ತಾರೆ. ಅಂದಿನಿಂದ ೩ದಿನಗಳವರೆಗೂ ಹೆಣ್ಣುಮಗಳು ಗುಡಿಸಿಲಿನಲ್ಲಿ ವಾಸಿಸಬೇಕು ೩ನೇ ದಿನ ಗುಡಿಸಲನ್ನು ಸೋದರಮಾವಂದೀರು ತಲೆಯ ಮೇಲೆ ಹೊತ್ತು ಹೋಳೆಯ ಹತ್ತಿರ ತೆಗೆದುಕೊಂಡುಹೋಗಿ ಸುಡುತ್ತಾರೆ. ಸುಟ್ಟ ಬೂದಿಯನ್ನು ಮಣ್ಣಿನಲ್ಲಿ ಮುಚ್ಚುತ್ತಾರೆ. ಗುಡಿಸಲು ಸುಟ್ಟನಂತರ ಮನೆಗೆ ಬಂದವರು ಸ್ನಾನ ಮಾಡುತ್ತಾರೆ, ಅವರಿಗೆ ಕೋಳಿಸಾರು ಮಾಡಿ ಅರದ ರಸವನ್ನು ಕುಡಿಯಲು ಕೊಡುತ್ತಾರೆ ನಂತರ ಅವರ ತಲೆಗೆ ಎಣ್ಣೆಹಚ್ಚುತ್ತಾರೆ. ಶಾಸ್ತ್ರವನ್ನು ನೆರವೇರಿಸಿರುವ ಕಾರಣ ಹುಡುಗಿ ಮನೆಯವರ ಕಡೆಯಿಂದ ಸೋದರಮಾವಂದೀರಿಗೆ ಹೊಸಬಟ್ಟೆ ಕೊಡುತ್ತಾರೆ. ಅಲ್ಲಿಗೆ ಗುಡಿಸಲು ಶಾಸ್ತ್ರ ಮುಗಿಯುತ್ತದೆ. ಗುಡಿಸಲು ಸುಟ್ಟ ೨ ದಿನಗಳ ನಂತರ ಅಂದರೆ ೫ನೇ ದಿನಕ್ಕೆ ಹೆಣ್ಣಿನ ಕೈಯಲ್ಲಿರುವ ಹವಳವನ್ನು ಬಿಚ್ಚುತ್ತಾರೆ.

## ಮದುವೆ ಆಚರಣೆಗಳು

### ಹೆಣ್ಣು ನಿಶ್ಚಯ ಶಾಸ್ತ್ರ

ಮನೆಯ ಹಿರಿಯರು ಸಮುದಾಯದಲ್ಲಿ ಇರುವ ತಮ್ಮ ಮನೆಗೆ ಒಪ್ಪುವಂತಹ ಹೆಣ್ಣಿನ ಮನೆಗೆ ಹೋಗಿ ಹೆಣ್ಣು ಕೊಡುತ್ತಾರ ಎಂದು ಕಾತರಿ ಮಾಡಿಕೊಳ್ಳುತ್ತಾರೆ. ಸಾಮಾನ್ಯವಾಗಿ ಸೋದರಸಂಬಂಧದಲ್ಲಿ ಮದುವೆ ಮಾಡುವುದು ಹೆಚ್ಚು. ಹೆಣ್ಣು ಕೊಡುತ್ತಾರೆಂದು ಹುಡಿಗಿಯ ಮನೆಯವರು ಒಪ್ಪಿದ ಮೇಲೆ ಒಂದು ಒಳ್ಳೆಯ ದಿನದಂದು ಸಮುದಾಯದ ಗೌಡರುಗಳನ್ನು ಹೆಣ್ಣಿನ ಮನೆಗೆ ಕರೆದುಕೊಂಡು ಹೋಗಿ ನಿಚ್ಚಯ ಮಾಡುತ್ತಾರೆ.

ಗಂಡಿನ ಕಡೆಯಿಂದ ಸೀರೆಯನ್ನು ತೆಗೆದುಕೊಂಡು ಹೋಗಿ ಹೆಣ್ಣಿಗೆ ಕೊಡುತ್ತಾರೆ. ಗಂಡಿನ ಕಡೆಯವರು ಕೊಟ್ಟ ಸೀರೆಯನ್ನು ಹೆಣ್ಣಿಗೆ ತೊಡಿಸುತ್ತಾರೆ. ೫ ತಟ್ಟೆ ಹಣ್ಣು ತಾಂಬುಲವಿಟ್ಟು ಮಂದಲಿಗೆ ಹಾಸಿ ಅದರ ಮೇಲೆ ಹೆಣ್ಣು-ಗಂಡು ಕೂರಿಸಿ ಅರಿಶಿಣ ಕುಂಕುಮ ಕೊಟ್ಟು, ಹೆಣ್ಣಿನ ಹಣೆಗೆ ಬೊಟ್ಟು ಇಡುವ ಮೂಲಕ ನಿಚ್ಚಯ ಮಾಡುತ್ತಾರೆ. ಇತ್ತೀಚೆಗೆ ಹೆಣ್ಣು ಗಂಡು ಪರಸ್ಪರ ಉಂಗುರ ತೊಡಿಸುತ್ತಾರೆ. ನಂತರ ಗಡಿಗೌಡರುಗಳು ಒಪ್ಪಂದದ ವೀಳ್ಯಕೊಡುತ್ತಾರೆ. ಹೆಣ್ಣು ಮತ್ತು ಗಂಡಿನ ಮನೆಯವರು ವೀಳ್ಯ ಸ್ವೀಕರಿ ಬೆಲ್ಲದ ನೀರು ಕುಡಿದರೆ ಮದುವೆ ಒಪ್ಪಂದವಾಗಿದೆ ಎಂದು ಅರ್ಥ. ಇವರಲ್ಲಿ ಬೆಲ್ಲದ ನೀರು ಶುಭದ ಸಂಕೇತ/ ಒಪ್ಪಿಗೆ ಸೂಚಿಸುವ ಪರ್ಯಾಯ ಪದ್ಧತಿಯು ಹೌದು.

ಮದುವೆ ನಿಶ್ಚಯದ ನಂತರ ಗಂಡು ಹೆಣ್ಣು ಇಬ್ಬರ ಮನೆಯಲ್ಲಿ ಮಾತುಕತೆಯಾಡಿ ಸಮುದಾಯದ ಗುರುವಯ್ಯರ ಬಳಿ ಹೋಗುತ್ತಾರೆ. ಗುರುವಯ್ಯ ಒಂದು ದಿನವನ್ನು ಮದುವೆಗೆಂದು ಸೂಚಿಸುತ್ತಾರೆ ಮತ್ತು ಎರಡು ಮನೆಕಡೆಯವರಿಗೆ ಅನುಕೂಲವಾಗುವಂತ ಒಂದು ದಿನವನ್ನು ಗೊತ್ತು ಮಾಡುತ್ತಾರೆ. ದಿನ ನಿಗದಿಯಾದ ನಂತರ ಒಂದು ಗುಡಿಯಬಳಿ ಸಮುದಾಯದ ಏಳಟ್ಟಿಗೌಡರುಗಳನ್ನು ಸೇರಿಸಿ ಇಂತ ದಿವಸ ಮದುವೆ ಮಾಡಬೇಕೆಂದುಕೊಂಡಿದ್ದೇವೆ ನೀವುಗಳು ಬಂದು ಮದುವೆ ಕಾರ್ಯ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತಾರೆ. ಗೌಡರುಗಳು ಮದುವೆಗೆ ಬೇಕಾದ ತಯಾರಿ ಮಾಡಿಕೊಳ್ಳಿ ನಾವು ಮದುವೆ ಕಾರ್ಯ ನೆರವೇರಿಸುತ್ತೀವೆಂದು ಸಮ್ಮತ್ತಿಸುತ್ತಾರೆ.

ಮದುವೆ ಗೊತ್ತು ಮಾಡಿದ ನಂತರ ಎರಡೂ ಮನೆಯವರು ಮನೆಯನ್ನು ಶುದ್ಧಗೊಳಿಸಿ ಸುಣ್ಣ ಬಣ್ಣ ಬಳಿದು ನವೀಕರಿಸುತ್ತಾರೆ. ಬಟ್ಟೆ-ಜವಳಿ, ವಡವೆ ತಮ್ಮ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಕರಿದಿಸುತ್ತಾರೆ. ಸಾಮಾನ್ಯವಾಗಿ ಮದುವೆ ಗಂಡು/ಹೆಣ್ಣಿನ ಮನೆಯ ಮುಂದೆ ನೆಡೆಯುತ್ತದೆ. ಇವರಲ್ಲಿ ಮದುವೆಗಳು ಸಮುದಾಯದ ಮಧ್ಯದಲ್ಲೇ ಅಂದರೆ ಮನೆಯಂಗಳದಲ್ಲೇ ಮಾಡಬೇಕು ಮತ್ತು ಯಾವುದೇ ಆಧುನಿಕ ಪೆಂಡಲ್ ಶಾಮಿಯಾನದ ಬಳಸದೆ ತೆಂಗಿನ ಗರಿ ಮತ್ತು ಹೊಂಗೆಮರದೆಲೆಯ ಚಪ್ಪರದಡಿಯಲ್ಲೇ ಮದುವೆ ನಡೆಯಬೇಕು ಮತ್ತು ಯಾವುದೇ ಬ್ರಾಹ್ಮಣ ಪುರೋಹಿತರಿಲ್ಲದೆ ಮಂತ್ರ

ಶ್ಲೋಕಗಳಿಲ್ಲದೆ ಕೇವಲ ಅವರ ಸಮುದಾಯದ ಗುರುಗಳ ಮುಂದಾಳತ್ವದಲ್ಲಿ ಮದುವೆ ಮಾಡಬೇಕು ಎಂದು ನಿಯಮಗಳಿವೆ.

ಮದುವೆಯ ಹಿಂದಿನ ದಿನ ಮದುವೆ ಚಪ್ಪರವನ್ನು ಹಾಕಲಾಗುತ್ತದೆ. ಚಪ್ಪರಕ್ಕೆ ಹಸಿ ತೆಂಗಿನಗರಿ ಮತ್ತು ಹೊಂಗೆಯನ್ನು ಮುಖ್ಯವಾಗಿ ಬಳಸಲಾಗುತ್ತದೆ. ಮಿಕ್ಕಂತೆ ಮಾವಿನ ತೋರಣ ಬಾಳೆಕಂದು ಹೂವು ಸಾಧಾರಣವಾಗಿ ಬಳಸುತ್ತಾರೆ. ಮದುವೆಯ ಚಪ್ಪರ ಎಂದರೆ ಹೊಂಗೆಮರದೆಲೆಯಿಂದಲೆ ತಯಾರು ಮಾಡಬೇಕು ಅದರ ಕೆಳಗಡೆ ಮಾತ್ರ ಮದುವೆ ನೆಡೆಯಬೇಕೆಂಬುದು ಇವರ ವಾಡಿಕೆ.

ಮದುವೆ ದಿನದ ಹಿಂದಿನ ರಾತ್ರಿ ಎಲ್ಲಾ ಗೌಡರುಗಳು ತಮ್ಮಡಿಗಳು ಮತ್ತು ಗುರುವಯ್ಯ ಮದುವೆ ಮನೆಗೆ ಬರುತ್ತಾರೆ.

**ತಟ್ಟೆಶಾಸ್ತ್ರ:** ತಟ್ಟೆ ಶಾಸ್ತ್ರ ಅಂದರೆ ೫ ತಟ್ಟೆಗಳಲ್ಲಿ ಹಣ್ಣು ತಾಂಬೂಲ ಅರಿಶಿಣ ಕುಂಕುಮ ಹೂವು ಇವುಗಳನ್ನು ಇಟ್ಟು ಮಾಡುವ ಶಾಸ್ತ್ರವಾಗಿದೆ. ಇದಕ್ಕೆ ವಸಗೆ ಮಾಡುವುದು ಎಂದು ಸಹ ಕರೆಯುತ್ತಾರೆ. ಸೋದರಮಾವಂದಿರು ೫ಬಗೆಯ ತಟ್ಟೆಗಳನ್ನು ತಂದಿರುತ್ತಾರೆ, ೯ ಅಥವಾ ೧೧ ಜನ ಮದುಮಕ್ಕಳಿಗೆ ಅರಿಶಿಣ ಹಚ್ಚಿ ಕುಂಕುಮವಿಟ್ಟು ಶಾಸ್ತ್ರ ಮಾಡುತ್ತಾರೆ. ಇವರ ಭಾಷೆಯಲ್ಲಿ ಈ ಶಾಸ್ತ್ರ ಸಂಪ್ರದಾಯವನ್ನು ಮಾಡುವುದಕ್ಕೆ ಸೀರುಮಾಡುವುದು ಎಂದು ಕರೆಯುತ್ತಾರೆ.

**ಮಾತುಕತೆ:** ತಟ್ಟೆಶಾಸ್ತ್ರ ಮುಗಿದ ನಂತರ ಹೆಣ್ಣು ಮತ್ತು ಗಂಡು ಎರಡೂ ಕಡೆಯವರು ಮತ್ತು ಗೌಡರುಗಳು ಒಂದು ಕಡೆ ಕುಳಿತು ಮತ್ತೊಂದು ಬಾರಿ ಹೆಣ್ಣು ಕೇಳುತ್ತಾರೆ. ಗಂಡಿನಕಡೆಯವರು ಎಲ್ಲಾರು ಎದುರು ಗೌಡರ ಮುಂದೆ ನಾವು ಇಂತಹ ಊರಿನ, ಇಂತಹ ಕುಲದ, ಇಂತಹ ಮನೆಯವರು, ಇಂತಹ ಊರಿನ ಇವರ ಮನೆಯಲ್ಲಿ ಹೆಣ್ಣು ಕೇಳುತ್ತಿದೇವೆ ಕೊಡುತ್ತಾರ ಕೇಳಿ ಎಂದು ಹೇಳುತ್ತಾರೆ. ಗೌಡರುಗಳು ಹೆಣ್ಣಿನ ಮನೆಯವರನ್ನು ಎನಪ್ಪಾ ನಿಮ್ಮ ಹೆಣ್ಣು ಕೇಳುತ್ತಿದ್ದಾರೆ ಕೋಡುವಿರಾ ಎಂದು ಸಮ್ಮತಿ ಕೇಳುತ್ತಾರೆ. ಆಗ ಹೆಣ್ಣಿನ ಮನೆಯವರು ಹೌದು ನಮ್ಮ ಹೆಣ್ಣನ್ನು ಕೊಡುವುದಕ್ಕೆ ನಮಗೆ ಒಪ್ಪಿಗೆ ಇದೆ ಎಂದು ಸೂಚುತ್ತಾರೆ. ಒಪ್ಪಿಗೆಯ ಸಂಕೇತವಾಗಿ ಬೆಲ್ಲದ ನೀರನ್ನು ಸ್ವೀಕರಿಸುತ್ತಾರೆ.

ಬೆಲ್ಲದನೀರು: ಬೆಲ್ಲವನ್ನು ನುಣ್ಣಗೆ ಜಜ್ಜಿ ಪುಡಿಮಾಡಿ ನೀರಿನಲ್ಲಿ ಬೆರಸಿರುತ್ತಾರೆ. ಒಂದು ತಟ್ಟೆಯಲ್ಲಿ ೫ ಲೋಟ ಬೆಲ್ಲದ ನೀರಿಟ್ಟು, ಒಬ್ಬರು ಚೊಂಬಿನಲ್ಲಿ ನೀರು, ಒಬ್ಬರು ವೀಳ್ಯ ತಂದು ೫ ಜನಕ್ಕೆ ಅಂದರೆ ಗಂಡಿನಕಡೆಯವರು ೪ ಜನ ಮತ್ತು ಒಬ್ಬ ಸೋರದಮಾವನಿಗೆ ಕೊಡುತ್ತಾರೆ. ೫ಜನ ನೀರಿನ ಚೊಂಬನ್ನು ಬಾಯಿಬಳಿ ಸೋಕಿಸಿ ವಾಪಾಸು ಕೊಡುತ್ತಾರೆ. ನಂತರ ೫ ಜನಕ್ಕೆ ಬೆಲ್ಲದ ನೀರು ಸೇವಿಸಲು ನೀಡುತ್ತಾರೆ.

**ಗುರುವಯ್ಯರನ್ನು ಕರೆತರುವುದು**: ಸಮುದಾಯದ ಯಾವುದೇ ಶುಭ ಕಾರ್ಯವಾಗಲಿ, ಸೂತಕವಾಗಲಿ, ಕುರುಮನ್ಸ್ರಲ್ಲಿ ಗುರುವಯ್ಯನವರು ಮುಖ್ಯ ಪಾತ್ರವಹಿಸುತ್ತಾರೆ. ಮದುವೆಯ ದಿನ ಗುರುವಯ್ಯ ಗಡಿಗೌಡರುಗಳು ಎಲ್ಲಾರು ಗುಡಿಹಟ್ಟಿಯಲ್ಲಿ ಇರುತ್ತಾರೆ. ಮದುವೆ ಮನೆಯವರು ವಾಲಗದ ಸಮೇತ ಗುಡಿಯಟ್ಟಿಗೆ ತೆರಳಿ ಗುರುವಯ್ಯರಿಗೆ ಹೊಸ ವಸ್ತ್ರ ಕಾಣಿಕೆಯಾಗಿ ನೀಡಿ ಮದುವೆ ಮನೆಗೆ ಚಾಮರ ಛತ್ರಿಯಿಡಿದು ಕರೆತರುತ್ತಾರೆ. ಮದುವೆ ಮನೆಗೆ ಬಂದ ಗುರುವಯ್ಯ ಬಂಡಾರ ಹಾಕುತ್ತಾರೆ ಮತ್ತು ಎಲ್ಲರಿಗೂ ಬೊಟ್ಟು ಇಡುತ್ತಾರೆ.

**ಅರಳವರೆ**: ಮಂದಲಿಗೆ ಹಾಸಿ ಕುರುಮನ್ಸ್ರ ದೈವವಾದ ಗಂಟೆಚೊಂಬು* ಇರಿಸಿ, ಗಂಡಿನ ಮನೆಯವರು ೨ ಭಾಗ ಹೆಣ್ಣಿನ ಮನೆಯವರು ೨ ಭಾಗ ಅರಳು ಮತ್ತು ಅವರೆಕಾಳುಗಳನ್ನು ಸುರಿಯುತ್ತಾರೆ. ಅದಕ್ಕೆ ಗುರುವಯ್ಯ ಪೂಜೆ ಮಾಡುತ್ತಾರೆ. ಕೊಂಗಬಳದಲ್ಲಿ ೫ಬಳ್ಳ ಅವರೆ ೪ ಬಳ್ಳ ಅರಳು ಅಳೆದು ಗಂಡಿನವರಿಗೆ ಹಾಕುತ್ತಾರೆ. ಹಾಗೆ ಹಾಕುವಾಗ ಗಂಡು ಹೆಣ್ಣು ಇಬ್ಬರ ಕುಲದ ಹೆಸರು ೩ ಬಾರಿ ಹೇಳುತ್ತಾರೆ(ಬನ್ನಿಗುಲದ ಹೆಣ್ಣುಮಗಳಿಗೆ ಕುಂಟುಕುಲದ ಗಂಡುಮಗನಿಗೆ ಅರಳವರೆ ಹಾಕುತ್ತೀವಿ).

**ಬಳೆಶಾಸ್ತ್ರ:** ಬಳೆಗಾತಿಗೆ ಹಣ್ಣು ಕಾಯಿ, ಬತ್ತ, ಸೀಡೆಬೆಲ್ಲ ಎಲ್ಲವು ಬಳೆಗಳ ಮುಂದೆಯಿರಿಸಿ ಹೆಣ್ಣಿನ ಕೈಯಲ್ಲಿ ಪೂಜೆ ಮಾಡಿಸಿ ಬಳೆಗಾತಿಗೆ ದಕ್ಷಿಣೆಕೊಟ್ಟು ಮೊದಲು ಹೆಣ್ಣಿಗೆ ನಂತರ ಉಳಿತ ಹೆಣ್ಣು ಮಕ್ಕಳಿಗೆ ಬಳೆತೊಡಿಸುತ್ತಾರೆ.

**ಗುಂಬ:** ಮಣ್ಣಿನ ಮಡಕೆಯನ್ನು ನೀರು ಹರಿಯುವ ಜಾಗಕ್ಕೆ ತೆಗೆದುಕೊಂಡು ಹೋಗಿ ತೊಳೆಯುತ್ತಾರೆ. ಶುದ್ಧಗೊಂಡ ೫ ಗುಂಬಗಳಿಗೆ ನೀರು ತುಂಬಿ ಅದರ ಒಳಗೆ ಕಾಣಿಕೆಯಾಗಿ ಒಂದು ನಾಣ್ಯವನ್ನು ಹಾಕಲಾಗುತ್ತದೆ. ನಂತರ ನೀರುಗುಂಬಗಳಿಗೆ ಕಾಯಿರಿಸಿ ಕಳಸವಡ್ಡಲಾಗುತ್ತದೆ. ಮಡಿಯಾಸಿ ಅದರ ಮೇಲೆ ಕಳಸಗುಂಬವನ್ನಿಟ್ಟು ಪೂಜಿಸಿ ತಲೆಮೇಲೆ ಮದುವೆ ಮನೆಗೆ ಹೊತ್ತುತಂದು ಗಂಡು ಮತ್ತು ಹೆಣ್ಣು ಇರುವ ಎರಡು ಕೊಠಡಿಯಲ್ಲಿ ಮರಳಿನ ಮೇಲೆ ಕಳಸಗುಂಬವನ್ನು ಹೂಡಲಾಗುತ್ತದೆ.

**ದೊಡ್ಡದೀಪ:** ಕಳಸದ ಮುಂದೆ ದೀಪಹೂಡಲಾಗುತ್ತದೆ. ದೀಪವನ್ನು ಕುಂದಾಣಿ ಮೇಲಿರಿಸಲಾಗಿರುತ್ತದೆ. ಮದುವೆ ಮುಗಿಯುವವರೆಗೂ ದೀಪ ನಂದಿಸದಹಾಗೇ ನೋಡಿಕೊಳ್ಳಬೇಕಾಗುತ್ತದೆ. ಆದ ಕಾರಣ ಸಂಪೂರ್ಣ ಒಂದು ದಿನ ದೀಪಕ್ಕೆ ಎಣ್ಣೆ ಹೆಚ್ಚು ಬೇಕಾಗುತ್ತದೆ ಎಂದು ದೀಪದ ಸುತ್ತ ಅನ್ನದಿಂದ ಕಲಾಯಿ ಮಾಡಿರುತ್ತಾರೆ ಮತ್ತು ದೀಪಕ್ಕೆ ಬಟ್ಟೆಯಿಂದ ತಯಾರಿಸಿದ ಬತ್ತಿಯನ್ನು ಬಳಸುತ್ತಾರೆ.

**೧೨ಸೀರು ಶಾಸ್ತ್ರ:** ೧೨ಬಗೆಯ ಮದುವೆಗೆ ಅಗತ್ಯವಿರು ವಸ್ತುಗಳನ್ನು ಎಲ್ಲವು ಇರಿಸಿ ಮಾಡುವ ಶಾಸ್ತ್ರವೇ ೧೨ಸೀರು. ಸೀಡೆಬೆಲ್ಲದಚ್ಚು, ಭತ್ತ, ತಂಗಿನಕಾಯಿ, ಜೀರಿಗೆ, ಮೆಣಸು, ಎದುರು ಬೆಳ್ಳಿ, ಭತ್ತ ಕುಟ್ಟುವ ಕುಂದಾಣಿ ಹೀಗೆ ೧೨ ಸೀರು ಮಾಡಿ ಎಲ್ಲವನ್ನು ಗುರು ಮತ್ತು ಗೌಡರುಗಳ ಹತ್ತಿರ ಪೂಜೆ ಮಾಡಿಸುತ್ತಾರೆ.

**ಹಾಲಗಂಬ:** ಸೋದರಮಾವಂದಿರು ಹಾಲದ ಮರದ ಕೊಂಬೆಯನ್ನು ಕತ್ತರಿ ಮರದ ಹತ್ತಿರ ಕಾಯುತ್ತಿರುತ್ತಾರೆ. ತಮ್ಮಡಿಗಳು, ಗುರುವಯ್ಯ, ಗೌಡರುಗಳು ವಾದ್ಯದ ಸಮೇತ ಅಲ್ಲಿಗೆ ತೆರಳಿ ಮರಕ್ಕೆ ಪೂಜೆ ಮಾಡಿ ಕತ್ತರಿಸಿರುವ ಕೊಂಬೆಗೆ ಪೂಜೆ ಮಾಡಿ ೯ಬಗೆಯ ದಾನ್ಯ (ಅಳಸಂದೆ, ಅವರೆ, ಭತ್ತ, ಹೆಸರುಕಾಳು, ಉರುಳಿಕಾಳು, ಅರಿಸಿಣಕೊಂಬು, ಸ್ಯಾಮೆ ನವಣೆ,) ಬಿಳಿಬಟ್ಟೆಗೆ ಅರಿ ಲೇಪಿಸಿ ಕಟ್ಟಲಾಗುತ್ತದೆ. ರಾಗಿಯನ್ನು ಹೊರತುಪಡಿಸಿ ಬೇರೆ ದಿನನಿತ್ಯ ಬಳಸುವ ದಾನ್ಯಗಳನ್ನು ಕಟ್ಟುತ್ತಾರೆ. ನಂತರ ಅದನ್ನು ಸೋದರಮಾವ ಮದುವೆ ಹಸೆಮಣೆ ಹಾಸುವ ಹತ್ತಿರ ನೆಡುತ್ತಾರೆ. ಸೋದರಮಾವ ಹೊಲದ ಮಣ್ಣನ್ನು ತಂದು ಹಾಲುಗಂಬಕ್ಕೆ ಸುತ್ತಲು ದಿನ್ನೆಕಟ್ಟುತ್ತಾರೆ. ಅದನ್ನು ಹಾಲುಗಂಬವೆಂದು ಕರೆಯುತ್ತಾರೆ.

**ತಾಳಿಕಟ್ಟುವುದು**: ಹಸೆಮಣೆಯ ಮುಂದೆ ಕುರುಮನ್ಸಲ್ಲಿ ಸಮುದಾಯದ ಗುರುಗಳು ಅಗ್ನಿಕೊಂಡ ತಯಾರು ಮಾಡಿರುತ್ತಾರೆ. ಗಂಡು ಹೆಣ್ಣು ಇಬ್ಬರನ್ನು ಅದರ ಮುಂದೆ ಕೂರಿಸಿ ತಾಳಿಪೂಜೆ ಮಾಡಿಸುತ್ತಾರೆ. ಮತ್ತು ಅಗ್ನಿಕೊಂಡಕ್ಕೆ ಪೂಜೆ ಮಾಡಿಸುತ್ತಾರೆ. ನಂತರ ನೆರದಿರುವ ಎಲ್ಲರಿಗೂ ತಾಳಿ ತೋರಿಸಿ ಯಾವುದೇ ಮಂತ್ರವಿಲ್ಲದೆ ಶ್ಲೋಕಗಳಿಲ್ಲದೆ ಗುರುಗಳ ಸೂಚನೆಯಂತೆ ಗಂಡು ತಾಳಿಕಟ್ಟುತ್ತಾನೆ.

**ದಾರೆ ಶಾಸ್ತ್ರ:** ತಾಳಿಕಟ್ಟಿದ ನಂತರ ಗಂಡು ಮತ್ತು ಹೆಣ್ಣಿನ ಕುಲದ ಹೆಸರು ಹೇಳಿ ದಾರೆ ಎರೆಯುತ್ತಿದ್ದೇವೆಂದು ೩ ಗೆರೆಗಳನ್ನು ಕೈಯ ಮೇಲೆ ಗರಿಕೆಯಿಂದ ಬರೆಯುತ್ತಾರೆ.

**ಸಾಸಕ್ಕಿ:** ನೆರೆದಿರುವ ಎಲ್ಲರು ಒಬ್ಬಬ್ಬರಾಗಿ ಬಂದು ಅಸೆಮೇಲೆ ಕುಳಿತಿರುವ ವಧು-ವರರ ಮೇಲೆ ೨ ಬಾರಿ ಅಕ್ಕಿ ಅಥವಾ ಭತ್ತವನ್ನು ಸಾಸಕ್ಕಿ ಪದವೇಳಿಕೊಂಡು ಹಾಕ್ಕುತ್ತಾರೆ ನವಜೋಡಿಯನ್ನು ಆರ್ಶಿವಾದಿಸುತ್ತಾರೆ. ಎಲ್ಲರು ಸಾಸಕ್ಕಿ ಹಾಕಿದ ಮೇಲೆ ಸೊದರಮಾವಂದೀರು ಹೆಣ್ಣು ಮತ್ತು ಗಂಡನ್ನು ಎತ್ತುಕೊಂಡು ಗಂಡಿನ ಮನೆಗೆ ಬಿಡುತ್ತಾರೆ. ನಂತರ ಹಸೆ ಸುತ್ತಲಾಗುತ್ತದೆ.

**ಗುಂಬ ಬಿಡುವುದು:** ಮದುವೆಯ ಹಿಂದಿನ ದಿನ ಹೂಡಿದ ಕಳಸಗುಂಬವನ್ನು ಗಂಡು ಮತ್ತು ಹೆಣ್ಣಿನ ತಲೆಮೇಲೆ ಹೊರಿಸಿಕೊಂಡು ನೀರಿರುವ ಹಳ್ಳದ ಹತ್ತಿರ ಕರೆದುಕೊಂಡು ಹೋಗುತ್ತಾರೆ.

ನೀರಿನ ಬಳಿ ಕಳಸವನ್ನು ತೆಗೆದು ಗುಂಬದ ನೀರನ್ನು ಹರಿಯುವ ನೀರಿನಲ್ಲಿ ಬಿಡುತ್ತಾರೆ. ಮತ್ತು ಗುಂಬವನ್ನು ತೊಳೆದು ಅದರಲ್ಲಿ ನೀರು ತೆಗೆದು ಹೊಸ ಮದುವೆಯಾದ ಗಂಡು ಹೆಣ್ಣು ಪಾದ ತೋಳೆಯುತ್ತಾರೆ. ಅಲ್ಲಿಂದ ಮನೆಗೆ ತೆರಳುತ್ತಾರೆ.

ಏಳುಮಂದೆರಾಯ: ಕುರುಮನ್ಸ್ರಲ್ಲಿ ಏಳುಮಂದೆರಾಯ ದೇವರಿಗೆ ವಿಶೇಷ ಸ್ಥಾನವಿದೆ. ಏಳು ಕುರಿ ಮಂದೆಗಳ ಒಡೆಯನೆ ಏಳುಮಂದೆರಾಯಪ್ಪ ದೇವರು. ಮದುವೆ, ಜಾತ್ರೆ, ಹಬ್ಬಗಳು ಮುಗಿದ ನಂತರ ಏಳುಮಂದೆರಾಯನಿಗೆ ಕಡಲೆಬೆಲ್ಲ ಮಡುಗೋದು ಇವರ ವಾಡಿಕೆ. ಸಮುದಾಯದ ಗಂಡುಮಕ್ಕಳು ಮಾತ್ರ ಮಾಡುವ ಆಚರಣೆ ಇದಾಗಿದೆ. ಏಳುಮಂದೆರಾಯ ದೈವವನ್ನು ಊರ ಹೊರಗೆ ಒಂದು ಜಮೀನಿನ ಬಳಿ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿ ದೈವದ ಗದ್ದುಗೆಯನ್ನು ಕುರಿಕಂಬಳಿಯಾಸಿ ಅದರ ಮೇಲಿರಿಸಲಾಗುತ್ತದೆ. ಪೂಜೆಗೆ ಏಳು ಮಣ ಕಳ್ಳೆ, ಏಳು ಮಣ ಬೆಲ್ಲ, ಏಳು ಕಾಣಿಕೆ, ಏಳು ಕಡ್ಡಿ, ಏಳು ಕರ್ಪೂರ ಏಳು ವಿಳ್ಯೆದೆಲೆ ಹೀಗೆ ಎಲ್ಲವು ಏಳು ವಸ್ತುಗಳಿಂದ ಪೂಜೆ ಮಾಡಿ ಗಡಿಗೌಡರುಗಳು ಎಲ್ಲರಿಗೂ ಬೊಟ್ಟುಕೋಡುತ್ತಾರೆ ಮತ್ತು ಪ್ರಸಾದವಾಗಿ ಕಡಲೆಪೊಪ್ಪ(ಪುಟಾಣಿ) ಬೆಲ್ಲವನ್ನು ಕೊಡಲಾಗುತ್ತದೆ. ಇದು ಕೇವಲ ಸಮುದಾಯದ ಗಂಡುಮಕ್ಕಳಿಗೆ ಮಾತ್ರ ಸೀಮಿತವಾದ ಪ್ರಸಾದವಾಗಿರುತ್ತದೆ ಬೇರೆಯಾರಿಗೂ ನೀಡುವಂತಿಲ್ಲ. ದೈವದ ಮುಂದೆಯೆ ತಿಂದು ಬಿಡಬೇಕು ಮತ್ತು ಪ್ರಸಾದ ಉಳಿದರೆ ಅದನ್ನು ಮನೆಗೆ ಕೊಂಡ್ಯೆಯುವಂತಿಲ್ಲ. ಹೊಲದಲ್ಲಿ ಗುಂಡಿ ತೋಡಿ ಅದನ್ನು ಅಲ್ಲಿಯೆ ಯಾರಕಣ್ಣಿಗು ಕಾಣದಂತೆ ಮುಚ್ಚಿಬಿಡಬೇಕು. ಈ ಪ್ರಸಾದವನ್ನು ಸಮುದಾಯದ ಹೆಣ್ಣು ಮಕ್ಕಳಿಗೂ ಕೊಡುವಂತಿಲ್ಲ ಮತ್ತು ಈ ಆಚರಣೆಯನ್ನು ನೋಡುವಂತಿಲ್ಲ.

**ದೊಡ್ಡವೀಳ್ಯ:** ಮದುವೆಯ ಹಸಿಚಪ್ಪರದಡಿಯಲ್ಲಿ ಗಡಿಗೌಡರುಗಳು ಏಳಟ್ಟಿಗೌಡರುಗಳು ಎಲ್ಲರು ಸೇರೆ ದೋಡ್ಡವೀಳ್ಯ ಹೊಡೆಯುತ್ತಾರೆ. ಒಂದು ತಟ್ಟೆಯ ತುಂಬಾ ವೀಳ್ಯದಎಲೆಯನ್ನು ತುಂಬಿ ಗಡಿ ಹೆಸರು ಹೇಳಿ ೧೨ ಭಾಗ ಬಿಡುತ್ತಾರೆ. ಗಂಡಿನ ಮನೆಯವರು ಏಳಟ್ಟಿದುಡ್ಡು ಎಂದು ೨೦೦೦ ರೂಗಳು ಮದುವೆ ಮಾಡಿಸಿದ ಕಾಣಿಕೆಯಾಗಿ ಎಲ್ಲಾ ಗೌಡರುಗಳಿಗೆ ಸೇರಿಸಿ ಕೊಡುತ್ತಾರೆ. ಭಾಗವಾದ ವೀಳ್ಯೆ ಮತ್ತು ದುಡ್ಡು ತೆಗೆದುಕೊಂಡು ಏಳಟ್ಟಿಗೌಡರುಗಳು ತಮ್ಮ ಕಾರ್ಯ ಮುಗಿಯಿತು ಎಂದು ಹೊರಡುತ್ತಾರೆ.

**ಮನೆದೇವರ ಪೂಜೆ:** ಮದುವೆಯಾದ ನಂತರ ಗಂಡು ಹೆಣ್ಣು ಇಬ್ಬರು ಗಂಡಿನ ಕುಲದೈವದ ಗುಡಿಹಟ್ಟಿಗೆ ಹೋಗಿ ಮದುವೆ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಅಲ್ಲಿಗೆ ಮದುವೆ ಕಾರ್ಯ ಮುಗಿಯುತ್ತದೆ. ಕರ್ನಾಟಕದ ಕುರುಮನ್ಸು ಮಲೆಮಹದೇಶ್ವ ಬೆಟ್ಟಸಾಲುಗಳಲ್ಲಿ ವಾಸವಿರುವ ಕಾರಣ ನವ ಜೋಡಿಗಳನ್ನು ಮಲೆಮಹದೇಶ್ವರ ಬೆಟ್ಟಕ್ಕೆ ಕರೆದುಕೊಂಡು ಹೊಗುವುದುಂಟು. ದೇವಸ್ಥಾನದ ದೇವರ ದರ್ಶನ ಪಡೆದು ಈಡುಗಾಯಿ ಹೊಡೆಯುವವರೆಗೂ ದೇವಸ್ಥಾನದ ಗೋಪುರ ನೋಡುವಂತಿಲ್ಲ ಎಂಬ ನಂಬಿಕೆಯು ಇವರಲ್ಲಿದೆ.

## ಬಸುರಿವಸಗೆ ಆಚರಣೆಗಳು

ಕುರುಮನ್ಸ್ರಲ್ಲಿ ಹೆಣ್ಣು ತನ್ನ ಮೊದಲ ಮಗುವಿಗೆ ತಾಯಿಯಾದಾಗ ಮಾತ್ರ ಈ ಸಂಪ್ರದಾಯವನ್ನು ಮಾಡುತ್ತಾರೆ. ಈ ಆಚರಣೆಯನ್ನು ಸೀರೆ ಹಾಕುವುದು ಎಂದು ಸಹ ಕರೆಯುತ್ತಾರೆ. ನೆಂಟರು ಮುತ್ತೈದೆಯರನ್ನು ಕರೆದು ಊಟ ಹಾಕಿಸಿ ನಂತರ ಬಸುರಿಯನ್ನು ಚಾಪೆಮೇಲೆ ಕೂರಿಸಿ ೫ ಮುತ್ತೈದೆಯರಿಂದ ಅರಿಶಿಣ ಕುಂಕುಮ ಹಚ್ಚಿಸಿ ಹೂ ಮುಡಿಸಿ ಉಡಿತುಂಬಿಸುತ್ತಾರೆ. ಈ ಸಂದರ್ಭದಲ್ಲಿ ನೆರೆದ ಹಿರಿಯರ ಕಾಲಿಗೆ ಬಸುರಿ ಹೆಣ್ಣು ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾಳೆ ಮತ್ತು ಸಮೀಪದ ದೇವರಗುಡಿಗೆ ಹೋಗಿ ತೆಂಗಿನಕಾಯಿ ಒಡೆದು ಬರುತ್ತಾರೆ. ನಂತರ ಹೆಣ್ಣನ್ನು ತನ್ನ ತವರು ಮನೆಗೆ ಕಳುಹಿಸುತ್ತಾರೆ. ಈ ಆಚರಣೆ ಕೇವಲ ಮೊದಲ ಮಗುವಿನ ಬಸುರಿಯಾದಾಗ ಮಾತ್ರ ಮಾಡಲಾಗುತ್ತದೆ.

**ಸಾವಿನ ಆಚರಣೆಗಳು**

ಸತ್ತವರನ್ನು ಹೂಳುವ ಮತ್ತು ಸುಡುವ ಪದ್ಧತಿ ಕುರುಮನ್ಸ್ ರಲ್ಲಿ ಕಾಣಬಹುದು. ಸಾಮಾನ್ಯವಾಗಿ ಹೂಳುವದೇ ಹೆಚ್ಚು ಅಸಹಜ ಸಾವುಬಂದರೆ ಮತ್ತು ಸಾಂಕ್ರಾಮಿಕ ರೋಗದಿಂದೇನಾದರು ಸತ್ತರೆ ಮಾತ್ರ ಸುಡುತ್ತಾರೆ. ಕುರುಮನ್ಸ್ನಲ್ಲಿ ಸತ್ತಾಗ ಸಾಮಾನ್ಯವಾಗಿ ೫ ದಿಗಳು ಸೂತಕ ಆಚರಿಸುತ್ತಾರೆ. ಕೆಲವರು ೩ ೯ ಅಥವಾ ೧೧ ದಿನಗಳು ಸೂತಕ ಆಚರಿಸುತ್ತಾರೆ. ಕುರುಮನ್ಸ್ನಲ್ಲಿ ತಮ್ಮಡಿಗಳು ಮತ್ತು ಗುರುವಯ್ಯನವರು ಯಾವುದೇ ಭಿನ್ನವಿಲ್ಲದೆ ಸತ್ತರೇ ಅವರಿಗೆ ವಿಶೇಷ ಸಂಪ್ರದಾಯಗಳನ್ನು ಮಾಡಲಾಗುತ್ತದೆ. ದೇವಲೋಕದ ದೈವ ಮರ್ಯಾದೆ ರೀತಿ ತಮ್ಮಡಿಗಳನ್ನು ಸತ್ತ ನಂತರ ಮಣ್ಣು ಮಾಡುತ್ತೀವೆಂದು ಉತ್ರೇಕ್ಷೆಯಿಂದಲು ಹೇಳುತ್ತಾರೆ.

**ಗುಡ್ಡಿಕೆಯುಳಿಸಿಕೊಂಡು ಸತ್ತ ತಮ್ಮಡಿಗಳಿಗೆ ಅಂತ್ಯಸಂಸ್ಕಾರ ಮಾಡುವ ಕ್ರಮ**

(ಕುರುಮನ್ಸ್ನಲ್ಲಿ ಸಮುದಾಯದ ಪೂಜಾರಿಗಳನ್ನು ತಮ್ಮಡಿಗಳು ಎಂದು ಕರೆಯುತ್ತಾರೆ. ಮತ್ತು ಪೂಜಾರಿತವನ್ನು ಗುಡ್ಡಿಕೆಯೆಂದು ಕರೆಯುತ್ತಾರೆ)

ಸತ್ತದೇಹವನ್ನಿಡಲು ತೆಂಗಿನಗರಿ ಮತ್ತು ಹೊಂಗೆಸೊಪ್ಪಿನಿಂದ ಹಸಿ ಚಪ್ಪರವಾಕಲಾಗುತ್ತದೆ. ಚಪ್ಪರಕ್ಕೆ ಮಾವಿನ ಸೊಪ್ಪಿನ ತೋರಣ ಕಟ್ಟಲಾಗುತ್ತದೆ. ಮತ್ತು ಚಪ್ಪರದಡಿಯಲ್ಲಿ ಮಂಚ(ಕಟ್ಟಲು)ವಾಕಿ ದೇಹವನ್ನು ಅದರ ಮೇಲೆ ಮಲಗಿಸುತ್ತಾರೆ.

ಉಳಿದ ತಮ್ಮಡಿಗಳು ಹಳ್ಳದ ಹತ್ತಿರ ಹೋಗಿ ನೀರಿನಲ್ಲಿ ಮುಳುಗಿ ಬಂಡಾರ ಧರೀಸಿ ೫ ಬಿಂದಿಗೆಯಲ್ಲಿ ಹಳ್ಳದ ನೀರನ್ನು ತುಂಬುತ್ತಾರೆ. ದೇವರ ಗಂಟೆ ಚೊಂಬು ಎಲ್ಲವನ್ನು ಹಳದ ಹತ್ತಿರ ತೆಗುಕೊಂಡು ಹೋಗಿ ಪೂಜೆ ಮಾಡುತ್ತಾರೆ. ೫ ಬಿಂದಿಗೆಗಳಿಗೆ ದಾರದಿಂದ ಸೂತ್ರ ಸುತ್ತಿ ಪೂಜೆ ಮಾಡಿ ಆದರಲ್ಲಿರುವ ನೀರನ್ನು ತೀರ್ಥವೆಂದು ಪರಿಗಣಿಸುತ್ತಾರೆ. ಆ ಸಂದರ್ಭದಲ್ಲಿ ಯಾರಾದರೊಬ್ಬ ತಮ್ಮಡಿಗೆ ಆವೇಶ ಬರುತ್ತದೆ ದೇವರ ಅಲಗ* (ದೈವದ ಚೂರಿ ಒಬ್ಬ ತಮ್ಮಡಿ ಕೈಯಲ್ಲಿಡಿದು ಅಲಲಲೋ ಎಂದು ಉದ್ಗರಿದುತ್ತಾರೆ)ಹಾಕುತ್ತಾರೆ ಮತ್ತು ಅಲ್ಲಿಂದ ತೀರ್ಥವನ್ನು ದೇಹದ ಹತ್ತಿರಕ್ಕೆ ತರುತ್ತಾರೆ. ತಂದ ತೀರ್ಥವನ್ನು ಮಲಗಿಸಿರುವ ದೇಹದ ಮೇಲೆ ಸುರಿಯುತ್ತಾರೆ. ದೇಹದ ತಲೆಮೇಲೆ ಮೊಸರು ಸೀಗೆಪುಡಿ ಅರಿಶಿಣಪುಡಿ ಕೈಎಣ್ಣೆ ಹಾಕುತ್ತಾರೆ. ನಂತರ ದೇಹಕ್ಕೆ ಅರಿಶಿಣ ಕುಂಕುಮವನ್ನು ಹಚ್ಚಿ ಪೂಜಿಸುತ್ತಾರೆ. ದೇಹದ ಮುಂದೆ ಮತ್ತೊಮ್ಮೆ ಅಲಗಾಕುತ್ತಾರೆ. ಘಂಟೆ ಕೊಟ್ಟು ತಮ್ಮಡಿ ಮಾಡಿರುತ್ತಾರೆ ಸತ್ತನಂತರ ದೇಹದ ಕೈಯಲ್ಲಿ ಘಂಟೆ ಕೊಟ್ಟು ತಮ್ಮಡಿತನವನ್ನು ಇಳಿಸುತ್ತಾರೆ. ಇದನ್ನು ಘಂಟೆಯಿಳಿಸೋದು ಎಂದು ಕರೆಯುತ್ತಾರೆ. ಒಂದು ವೇಳೆ ಹೆಂಡತಿ ಬದುಕಿದ್ದರೆ ಸಂಬಂಧ ಮಾಲೆ ಎಂದು ಹೆಂಡತಿಕೈಯಿಂದ ತುಳಸಿ ಹಾರವನ್ನು ದೇಹಕ್ಕೆ ೩ ಭಾರಿ ಸಂಬಂಧ ಇಳಿತು ಎಂದು ಕೆಳಕ್ಕೆ ಇಳಿಸುತ್ತಾರೆ. ನಂತರ ದೇಹವನ್ನು ಎತ್ತಿಕೊಂಡು ಹೋಗಿ ಮಣ್ಣು ಮಾಡುತ್ತಾರೆ.

**ಸಾಮಾನ್ಯರು ಸತ್ತಾಗ ಮಾಡುವ ಕಾರ್ಯಗಳು**

ಸತ್ತದೇಹಕ್ಕೆ ತಲೆಮೇಲೆ ಕೈಎಣ್ಣೆ ಮೊಸರು ಸೀಗೆಪುಡಿ ಹಚ್ಚಿ ಸ್ನಾನ ಮಾಡಿಸಿಸುತ್ತಾರೆ. ಗಂಡು ಸತ್ತರೆ ಸ್ವಂತದವರು ಮತ್ತು ಬೀಗರು, ಹೆಣ್ಣು ಸತ್ತರೆ ಗಂಡನ ಮನೆಯವರು ಮತ್ತು ತವರುಮನೆಯವರು ವಸ್ತ್ರಗಳನ್ನು ತರುತ್ತಾರೆ. ಮೊದಲು ಸ್ವಂತದವರು ನಂತರ ಬೀಗರು ಹೀಗೆ ವಸ್ತ್ರಗಳನ್ನು ತಲೆಕೆಳಗಿರಿಸಿ ಪೂಜಿಸುತ್ತಾರೆ. ಒಂದು ಬಾರಿ ಎಲ್ಲರು ಒಟ್ಟಿಗೆ ಪೂಜೆ ಸಲ್ಲಿಸಿ ದೇಹವನ್ನು ಮಣ್ಣಿಗೆ ಹಾಕಲಾಗುತ್ತದೆ.

ಸಮುದಾಯದ ಯಾವ ವ್ಯಕ್ತಿ ಸತ್ತರು ಮಣ್ಣಾದ ಮುರುದಿನ ಸೂತಕದ ಮನೆ ಶುದ್ಧ ಮಾಡಲಾಗುತ್ತದೆ. ನಂತರ ಮನೆಯವರು ಸಂಬಂಧಿಕರು ಮತ್ತು ದೊಡ್ಡವರು ಎಲ್ಲಾ ಸಮಾದಿ ಬಳಿ ತೆರಳುತ್ತಾರೆ. ಸಮಾದಿಗೆ ಪೂಜೆಮಾಡಿ ಹಾಲುತುಪ್ಪ ಬಿಡುತ್ತಾರೆ.

ನಂತರ ಕುಲಸ್ಥರನ್ನು ಒಂದು ಗೂಡಿಸಿ ತಿಥಿಯ ದಿನಾಂಕವನ್ನು ಎಂದು ಮಾಡಬೇಕು ಎಂದು ಕೇಳುತ್ತಾರೆ. ಕುಲಸ್ಥರು ಅನುಕೂಲಕ್ಕನುಗುಣವಾಗಿ ದಿನಾಂಕ ನಿಗದಿ ಪಡಿಸುತ್ತಾರೆ.

ನಿಗದಿತ ದಿನಾಂಕದಂದು ಊರಲ್ಲಿರುವ ಮಾರಮ್ಮನ ದೇವಸ್ಥಾನದ ಬಳಿ ಎಲ್ಲರು ಸೇರುತ್ತಾರೆ. ತಡಿಕೆಯನ್ನು ತಯಾರಿಸಿ ಗುಡಿಗೆ ತಂದಿರುತ್ತಾರೆ. ಸತ್ತವರ ಮನೆಯಿಂದ ಒಂದು ಚೊಂಬು ನೀರು, ಹಾಲು, ತುಪ್ಪ, ಹಣ್ಣು, ಕಾಯಿ, ಆವರಕೆ ಹೂವೂ ತಂದಿರುತ್ತಾರೆ. ತಡಿಕೆಗೆ ಅರಿಶಿಣ, ಕುಂಕುಮ, ಸೀಗೆಕಾಯಿ, ಹಾಲುತುಪ್ಪ ಬಿಟ್ಟು ತೊಳೆಯುತ್ತಾರೆ ಮತ್ತು ಅದಕ್ಕೆ ಬಂಡಾರ ಹಚ್ಚಿ ಹಣ್ಣು ಕಾಯನ್ನಿಟ್ಟು ಪೂಜೆನ ಮಾಡುತ್ತಾರೆ. ತಡಿಕೆಯನ್ನು ದೇವರ ಗುಡಿಗೆ ಅಡ್ಡವಾಗಿರಿಸಿರುತ್ತಾರೆ. ನಂತರ ಸತ್ತ ವ್ಯಕ್ತಿಯ ಕುಲದ ಹೆಸರು ಹೇಳಿ (ಬನ್ನಿಗುಲದ ಮೊಮ್ಮಗ ಬರುತ್ತಾನೆ) ಸಗ್ಗದ ಬಾಗಿಲು ಬಗ್ಗನೆ ತೆಗಿ ಎಂದು ೩ ಬಾರಿ ತಡಿಕೆಯನ್ನು ತಗೆದು ಮುಚ್ಚುತ್ತಾರೆ. ಮೂರನೆ ಬಾರಿಗೆ ತಡಿಕೆ ತಗೆದು ಬಿಡುತ್ತಾರೆ. ೧೨ ಗಡಿಕಾರರಿಗೂ ಕುಲದ ಹೆಸರು ಹೇಳಿ ಬೊಟ್ಟು ಕೊಟ್ಟು ಮನೆಗೆ ತೆರಳುತ್ತಾರೆ.

ಮನೆಯಲ್ಲಿ ಎಲ್ಲಾ ಕಡೆ ತೀರ್ಥ ಹಾಕಲಾಗುತ್ತದೆ. ಮೊದಲು ಕೋಳಿಮರಿ ಮೇಲೆ ತೀರ್ಥ ಹಾಕುತ್ತಾರೆ. ಅದು ತಲೆ ಕೊಡವಿದರೆ ಅದನ್ನು ಹಿಡಿದುಕೊಳ್ಳಲಾಗುತ್ತದೆ ನಂತರ ಆಡು ಮರಿಗೆ ತೀರ್ಥ ಹಾಕುತ್ತಾರೆ ಅದು ಸಹ ತಲೆ ಕೊಡವಬೇಕು. ಕೋಳಿ ಮತ್ತು ಮೇಕೆಯನ್ನು ಕಡಿಯುತ್ತಾರೆ. ಕೋಳಿ ಮಾಂಸವನ್ನು ಮನೆಯ ಒಳಗಡೆ ಅಡುಗೆ ಮಾಡುತ್ತಾರೆ. ಅದನ್ನು ಮೀಸಲು ಕೋಳಿ ಸಾರು ಎಂದು ಕರೆಯುತ್ತಾರೆ. ಕೋಳಿ ಸಾರು ಅನ್ನ ಮಾಡಿ ಅದನ್ನು ಸತ್ತವರ ಹೆಸರಿನಲ್ಲಿ ಮನೆಯಲ್ಲಿ ಎಡೆಹಾಕಿ ಪೂಜೆ ಮಾಡುತ್ತಾರೆ. ನಂತರ ಹಳ್ಳದ ಹತ್ತಿರ ಹೋಗುತ್ತಾರೆ. ಅಲ್ಲಿ ೨ ಕಲ್ಲು ಬೊಂಬೆ ಇಟ್ಟು ಅದನ್ನು ಪೂಜಿಸಿ ಅಗಣಿ ಅಂಬಿನ ಎಲೆಯಲ್ಲಿ ಒಂದು ಪಿಡಸೆ ಅನ್ನವನ್ನು ನೆರೆದ ಎಲ್ಲರ ಕೈಯಲ್ಲಿ ನೀಡಲಾಗುತ್ತದೆ. ಅದನ್ನು ಸ್ವಲ್ಪ ದೂರದಲ್ಲಿ ಅಲ್ಲಲ್ಲಿ ಇಡುತ್ತಾರೆ. ಆ ಅನ್ನವನ್ನು ಕಾಗೆ ಬಂದು ತಿನ್ನಬೇಕು. ಕಾಗೆ ಬರುವವರೆಗೂ ಕಾಯುತ್ತಾರೆ ಕಾಗೆ ಮುಟ್ಟಿದ ನಂತರ ಗೌಡರುಗಳಿಗೆ ಬೊಟ್ಟು ಕೊಟ್ಟು ಮನೆಗೆ ತರಳುತ್ತಾರೆ. ಮನೆಯಲ್ಲಿ ಮೇಕೆ ಮಾಂಸನ್ನು ತಯಾರಿಸಿ ಎಲ್ಲರು ಊಟ ಮಾಡುತ್ತಾರೆ. ಒಂದು ವೇಳೆ ಕಾಗೆ ಬಾರದೆ ಹೋದ ಸಂದರ್ಭದಲ್ಲಿ ಇವರು ಸಹ ಊಟ ಮಾಡುವಂತಿಲ್ಲ. ಈ ಎಲ್ಲ ಕಾರ್ಯಗಳು ಮಾಡಿದಾಗಲೆ ಸೂತಕ ಕಳೆಯುತ್ತದೆ ಎಂದು ಇವರ ನಂಬಿಕೆ.

**ಸಮಾರೋಪ**

ಒಂದು ದೇಶದ ಸಂಸ್ಕೃತಿಯನ್ನು ತಿಳಿಯಬೇಕಾದರೆ ಅದರಲ್ಲಿ ವಾಸಿಸುವ ಜನಜೀವನ ಅರಿಯಬೇಕು. ಭಾರತದಂತಹ ವೈವಿದ್ಯಮಯ ಜನ ಸಮುದಾಯವನ್ನು ಹೊಂದಿರುವ ರಾಷ್ಟ್ರದಲ್ಲಿ ಅನೇಕ ಸಣ್ಣ ಸಮುದಾಯದಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರ ಸಂಪ್ರದಾಯಗಳು ಹಾಗೂ ಆಚರಣೆಗಳನ್ನು ತಿಳಿಯುವುದು ಅತಿ ಮುಖ್ಯವಾಗುತ್ತದೆ. ಅಂತಹ ಒಂದು ಸಣ್ಣ ಪ್ರಯತ್ನವೆ ಪ್ರಸ್ತುತ ಲೇಖನದ ಆಶಯವಾಗಿದೆ. ಕರ್ನಾಟಕ ಮತ್ತು ತಮಿಳಿನಾಡಿನ ಗಡಿಭಾಗದಲ್ಲಿ ವಾಸವಾಗಿರುವ ಪಶುಪಾಲನಾ ಕುರುಮನ್ಸ್ ಸಮುದಾಯವು ದಕ್ಷಿಣ ಭಾರತದ ಮೂಲನಿವಾಸಿ ಬುಡಕಟ್ಟುಗಳಲ್ಲೊಂದು. ಕಂದಮಿಳು ಭಾಷೆ ಮಾತನಾಡುವ ಇವರು ವಿಶೇಷ ಅಚರಣೆ ಸಂಪ್ರದಾಯಗಳನ್ನು ಹೊಂದಿದ್ದಾರೆ. ಬುಡಕಟ್ಟು ಲಕ್ಷಣ ಹೊಂದಿರುವ ಇವರ ಸಂಪ್ರದಾಯಗಳು ಇಂದಿಗೂ ಮೂಲ ರೂಪದಲ್ಲಿ ಉಳಿದಿರುವ ಸತ್ಯದ ಸಂಗತಿಯಾಗಿದೆ. ಹುಟ್ಟು, ಮುಟ್ಟು, ಮದುವೆ, ಸಾವಿನ ಸಂದರ್ಭದ ಆಚರಣೆಗಳು ಒಬ್ಬ ವ್ಯಕ್ತಿಯ ಜೀವನದಲ್ಲಿ ಪ್ರಮುಖ ಘಟ್ಟಗಳಾಗಿರುತ್ತವೆ. ಆ ಸಂಪ್ರದಾಯಗಳೇ ಮನುಷ್ಯನ ಬೇರುಗಳನ್ನು ತಿಳುಸುತ್ತವೆ. ಅದರಿಂದಲೇ ವ್ಯಕ್ತಿಯ ಅಸ್ತಿತ್ವದ ನೆಲೆಯನ್ನು ಅರಿಯಬಹುದು. ಅವುಗಳನ್ನು ಬರವಣಿಗೆÉ ಮೂಲಕ ಪರಿಚಯಿಸುವ ಪ್ರಯತ್ನವೆ ಇದಾಗಿದೆ.

**ಪರಾಮರ್ಶನ ಗ್ರಂಥಗಳು**


- ಮೊಗಳ್ಳಿ ಗಣೇಶ್, ಆದಿಮ ಜನಪದ, ಪ್ರಗತಿ ಗ್ರಾಫಿಕ್ಸ್ ಬೆಂಗಳೂರು ೨೦೧೪.
- ರಾಜಾರಾಮ ಹೆಗಡೆ, ಲೌಕಿಕ ಅಲೌಕಿಕ, ಆನಂದಕAದ ಗ್ರಂಥಮಾಲೆ ಮಲ್ಲಾಡಿಹಳ್ಳಿ, ೨೦೦೧.

- ಹಿರೇಮಠ ಎಸ್ ಎಸ್, ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಜಾತ್ರೆಗಳು, ಸಮತಾ ಪ್ರಕಾಶನ ಹೊಸಪೇಟೆ ೧೯೯೩
- Aiyappan A, *Report on the Socio-Economic Conditions of the Aboriginal Tribes of the Province of Madras*, Government Press, Madras1948
- Metry K M, Kurumans (A group of tribes), Vidhyanidhi Prakasana, Gadag, 2021
- Ramanadhaswamy C, *An enthropological profile of kurumans in Tamilnadu*, department of anthropology Pondicherry central university 2003
- Singh K S, *The scheduled Tribes,* Oxford University press Delhi.1994.
- Singh K S, *Communities, Segments, Synonymus, Surnames and titles*, Oxford University press Delhi.1996.
- Thurston, Edgar and Rangachari, K, *Caste and Tribes of Southern India*. Government press madras 1909



ಶಿಲ್ಪ ಕೆ ಎಚ್
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದಾಲಯ ಹಂಪಿ
ಮೊ:7760677970